# ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು

ಬೆಂಗಳೂರು, ಕರ್ನಾಟಕ ರಾಜ್ಯ

(ಕರ್ನಾಟಕ ಶುಶ್ರೂಷ ದಾದಿ ಹಾಗೂ ಆರೋಗ್ಯ ಸಂದರ್ಶಕಿಯರ ಕಾಯ್ದೆ 1961ರನ್ವಯ ಸ್ಥಾಪಿತ)


**ಕ್ರಮಸಂಖ್ಯೆ** : KSNC / **ದಿನಾಂಕ** :

ನಂ : ಕರಾಶುಪ : 576: 2023-24 ದಿ : 25-05-2023

## ಅಧಿಸೂಚನೆ

ವಿಷಯ : ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಾಲಾ/ಕಾಲೇಜುಗಳ ಮಾನ್ಯತಾ ನವೀಕರಣ ಕುರಿತು

******

ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನರ್ಸಿಂಗ್ ಶಾಲೆ ಹಾಗೂ ಕಾಲೇಜುಗಳು ಪ್ರತಿವರ್ಷವು ಮಾನ್ಯತಾ ನವೀಕರಣವನ್ನು ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನಿಂದ ಪಡೆಯುವುದು ಕಡ್ಡಾಯವಾಗಿರುತ್ತದೆ.

ಮುಂದುವರೆದು ಶುಶ್ರೂಷ ಸಂಸ್ಥೆಗಳು ಹೆಸರು ಬದಲಾವಣೆ, ವಿಳಾಸ ಬದಲಾವಣೆ, ಪ್ರವೇಶಮಿತಿ ಹೆಚ್ಚಳ ಹಾಗೂ ಹೊಸ ಕೋರ್ಸುಗಳ ಸೇರ್ಪಡೆಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ/ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿಯಿಂದ ಅಧಿಸೂಚನೆ ಪಡೆದ ನಂತರ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನಿಂದ ಮಾನ್ಯತೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಆದರೆ ಕೆಲವು ಸಂಸ್ಥೆಗಳು ಹೆಸರು ಬದಲಾವಣೆ, ವಿಳಾಸ ಬದಲಾವಣೆ, ಪ್ರವೇಶಮಿತಿ ಹೆಚ್ಚಳ, ಹೊಸ ಕೋರ್ಸುಗಳ ಸೇರ್ಪಡೆ ಬಗ್ಗೆ ಪರಿಷತ್ತಿನ ಗಮನಕ್ಕೆ ತರದೆ ಮಾನ್ಯತೆಯನ್ನು ಪಡೆಯದೆ ನಡೆಸುತ್ತಿರುವುದು ತಿಳಿದು ಬಂದಿದ್ದು ಮುಂದಿನ ದಿನಗಳಲ್ಲಿ ಇಂತಹ ಸಂಸ್ಥೆಗಳಿಂದ ತರಬೇತಿ ಹೊಂದಿದ/ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಶುಶ್ರೂಷ ಪರಿಷತ್ತಿನ ನೋಂದಣಿ ಸೌಲಭ್ಯವನ್ನು ತಡೆ ಹಿಡಿಯಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

30/5/23

ರಿಜಿಸ್ಟ್ರಾರ್

ಪ್ರತಿಯನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು-560 001.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿ.ಎಂ.ಸಿ.ಆರ್.ಐ. ಬೆಂಗಳೂರು
3. ರಿಜಿಸ್ಟ್ರಾರ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಜಯನಗರ 4ನೇ ಟಿ. ಬ್ಲಾಕ್, ಬೆಂಗಳೂರು
4. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿ, ಲೈಬ್ರರಿ ಬ್ಲಾಕ್, ಬಿ.ಎಂ.ಸಿ.ಆರ್.ಐ. ಆವರಣ, ಬೆಂಗಳೂರು
5. ಎಲ್ಲಾ ಸಂಯೋಜಿತ ಶಾಲಾ/ಕಾಲೇಜುಗಳ ಪ್ರಾಂಶುಪಾಲರುಗಳಿಗೆ
6. ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನ ಅಂತರ್ಜಾಲ
7. ಕಛೇರಿ ಪ್ರತಿ


**ಕಛೇರಿ** : # 71, ನೈಟಿಂಗೇಲ್ ಟವರ್ಸ್, ಎ-ಸ್ಟ್ರೀಟ್, 6ನೇ ಅಡ್ಡರಸ್ತೆ, ಎ. ಆರ್. ಬಡಾವಣೆ, ಗಾಂಧಿನಗರ, ಬೆಂಗಳೂರು - 560 009 ☎ : 080-22383230 ಫ್ಯಾಕ್ಸ್ : 080-41516486

**ಇಮೇಲ್** : karnatakastatenursingcouncil@gmail.com, **ವೆಬ್‌ಸೈಟ್** : www.ksnc.karnataka.gov.in